ದಿನಾಂಕ :13 ನೇ ಜನವರಿ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು ವಾದಿ ಪರ ವಕೀಲರಿಂದ :</u> ನಾನ 9 ನೇ ತರಗತಿ ತನಕ ವ್ಯಾಸಾಂಗ ಮಾಡಿದ್ದೇನೆ ನನಗೆ ಆಂಗ್ಲ ಭಾಷೆ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಅಂಶಗಳನ್ನು ನನಗೆ ವಕೀಲರು ಓದಿ ಹೇಳಿದರು ಆ ನಂತರ ಸಹಿ ಮಾಡಿದೆನು. ನ್ಯಾಯಾಲಯದಲ್ಲಿ ನಾನು ವಕೀಲರನ್ನು ಬೇಟಿ ಮಾಡಿದ್ದೇನೆ ಆದಕ್ಕಿಂತ ಮೊದಲು ಬೇಟಿ ಮಾಡಿಲ್ಲ. ಪ್ರತಿವಾದಿ 1 ರವರು ನಮ್ಮ ಕುಟುಂಬದವರು. ನಾನು ಮತ್ತು ಪ್ರತಿವಾದಿ 1 ರವರ ಅನ್ಯೋನ್ಯವಾಗಿದ್ದೇವೆ . ನಾನು ಮತ್ತು ಅವರು ಪ್ರತಿವಾದಿ ಪರಸ್ಪರ ಸಹಾಯ ಮಾಡಿಕೊಳ್ಳುವ ಸಂದರ್ಭ ಬಂದರೆ ಮಾಡಿಕೊಳ್ಳುತ್ತೇವೆ ಆದರೆ ಈರಗೂ ಅಂತಹ ಸಂದರ್ಭ ಬಂದಿಲ್ಲ.

ವಾದಿ ಸರ್ವೆ ನಂ 98/2 ಕ್ಕೆ ದಾವೆ ಸಲ್ಲಿಸಿದ್ದಾರೆ. ಸದರಿ ಸರ್ವೆ ನಂ 98/2 ವಾದಿ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿ. ಸದರಿ ಆಸ್ತಿ ವಾದಿ ಯವರ ತಂದೆ ಮಾದಯ್ಯ ರವರ ಹಿಸೆಗೆ ವಿಭಾಗದಲ್ಲಿ ಬಂದಿದ್ದು ಈಗ ವಾದಿಗೆ ಬಂದಿದೆ ಎಂದರೆ ಸರಿ. 1982 ರಲ್ಲಿ ಅಗ್ರಿಮೆಂಟ್ ನಂತೆ ಅಪ್ಪಣ್ಣ ಖರೀದಿಸಿದರು. ಕುಶಾಲಪ್ಪ ಮತ್ತು ಪೂವಯ್ಯ ಮಾರಾಟ ಮಾಡಿದರು. ಸದರಿ ಕರಾರು ಪಂಚಾಯಿತಿಯಲ್ಲಿ ಆಯಿತು. ಕರಾರು ಆದ ನಂತರ ಕ್ರಯಪತ್ರ ಆಗಿರುವುದಿಲ್ಲ.. ನಾನು ಹೇಳಿದಂತೆ 1982 ರಲ್ಲಿ ಯಾವುದೇ ಕರಾರು ಆಗಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿ 1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1982 ರಲ್ಲಿ ಕರಾರು ಆಗುವಾಗ ಪಂಚಾಯಿತಿ ಅಧ್ಯಕ್ಷರಾದ ತಮ್ಮಯ್ಯ ಮಾತ್ರ ಇದ್ದರು. ನಾನು ಸದರಿ ಕರಾರಿಗೆ ಸಾಕ್ಷಿದಾರರನ್ನಾಗಿ ಸಹಿ ಮಾಡಿಲ್ಲ ಏಕೆಂದರೆ ಅವರು ನನ್ನನ್ನು ಕರಾರು ಮಾಡಿಕೊಳ್ಳಲು ಕರೆದಿರುವುದಿಲ್ಲ. ಆದ ಕಾರಣ ನಾನು ಕರಾರು ಮಾಡುವ ಬಳಿ ಹೋಗಿರುವುದಿಲ್ಲ. ಸರ್ವೆ ನಂ 98/2 ರಲ್ಲಿ 40 ಸೆಂಟ್ ಜಾಗವನ್ನು ಪ್ರತಿವಾದಿ 1 ಅತಿಕ್ರಮಿಸಿದದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಪ್ರತಿವಾದಿ 1 ಸ್ವಾಧೀನದಲ್ಲಿದ್ದಾರೆ . ಪ್ರತಿವಾದಿ 3 ರಿಂದ 5 ರವರು ಸಹ ದಾವಾ ಸ್ವತ್ತಿನ ಪಕ್ಕದ ಜಾಗದಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಲ್ಪ ಭಾಗವನ್ನು ಪ್ರತಿವಾದಿ 3 ರಿಂದ 5 ರವರು ಅತಿಕ್ರಮಿಸಿ ಸ್ವಾದೀನದಲ್ಲಿದ್ದಾರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನಿಂದ ನಮ್ಮ ಮನೆ ಸುವಾರು ಅರ್ಧ ಕಿಲೋ ಮೀಟರ್ ದೂರ ಇದೆ ಎನ್ನುತ್ತಾರೆ. ನಾನು ಪ್ರತಿವಾದಿ 1 ರವರಿಗೆ ಸಹಾಯಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಪ್ರತಿವಾದಿ 1 ರವರು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ನಾನ ಯಾವ ವಿಚಾರ ಸಾಕ್ಷಿ ನುಡಿಯಬೇಕೆಂದು ಪ್ರತಿವಾದಿ 1 ನನಗೆ ಹೇಳಿದ್ದಾರೆ ಎಂದರೆ ಸರಿ . ಪ್ರತಿವಾದಿ 1 ರವರ ಕೋರಿಕೆ ಮೇರೆಗೆ ಬಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ .

ಅಪ್ಪಣ್ಣ ಎನ್ನುವವರಿಗೆ ಮತ್ತೊಂದು ಹೆಸರು ರಾಜು ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.